ಗಮನವಿಟ್ಟು ಕೇಳಿದೆ.

'ನಾನು ನಟನಾಗಿದ್ದೆ...'

'ನಿಜವಾಗ್ಲೂ?'

ಅವನು ತನ್ನ ಶರ್ಟ್‌ನ ಜೇಬಿಗೆ ಕೈತುರುಕಿ ಒಂದು ಮಡಚಿದ ಕಾಗದವನ್ನು ಹೊರತೆಗೆದ; ಅದರಿಂದ ಒಂದೊಂದು ಫೋಟೊವನ್ನು ಹೊರತೆಗೆದು ನನ್ನೆಡೆಗೆ ಚಾಚಿದ. ನಾನು ಆಶ್ಚರ್ಯದಿಂದ ಅವನ ಫೋಟೊವನ್ನು ನೋಡಿದೆ. ಫೋಟೊದಲ್ಲಿ ಅವನು ಯುವಕನಾಗಿ ಕಾಣಬರುತ್ತಿದ್ದು, ಅವನು ಸ್ಟೇಜಿನ ನುರಿತ ಕಲಾಕಾರನಾಗಿದ್ದ. ಆ ಫೋಟೊಗಳನ್ನು ಸ್ಟೇಜ್ ಮೇಲೆ ಅಭಿನಯಿಸುವಾಗ ತೆಗೆಯಲಾಗಿತ್ತು; ಅವನು ಅನೇಕ ಪಾತ್ರಗಳಲ್ಲಿ ಅಭಿನಯಿಸಿದ್ದ. ಅವನ ಈ ರೂಪ ಆ ಚಿತ್ರಗಳಲ್ಲಿ ಅದೆಷ್ಟು ಭಿನ್ನವಾಗಿದೆ ಎಂದು ಅವನನ್ನು ಮತ್ತೆ ನೋಡಿದೆ.

'ನೀವು ಈಗಲೂ ಒಬ್ಬ ನಟರೇ ಆಗಿದ್ದೀರ, ನೀವು ಸ್ವಲ್ಪ ನಿಮ್ಮ ಆಕಾರವನ್ನು ಸರಿಪಡಿಸಿಕೊಳ್ಳಿ. ಮದ್ಯ ಸೇವನೆಯನ್ನು ನಿಲ್ಲಿಸಿ. ಏನಾದರೂ ಕೆಲಸ ಮಾಡಿ' ನಾನು ತಮಾಷೆ ಮಾಡಿದೆ. ವೃದ್ಧ ಮುಗುಳ್ನಕ್ಕ. ನಾನೂ ಮುಗುಳ್ನಕ್ಕೆ. ಅವನಿಗೆ ಶುಭವನ್ನು ಹಾರೈಸಿದೆ. ನಂತರ ಎದ್ದು ನನ್ನ ಬ್ಯಾಗನ್ನು ಹೆಗಲಿಗೇರಿಸಿಕೊಂಡು ಪಾರ್ಕ್‌ನಲ್ಲಿ ಕೂತಿದ್ದ ಜನರಿಗೆ ಟಾಟಾ ಹೇಳುತ್ತಾ, ನಕ್ಷೆಯಲ್ಲಿ ನನ್ನ ಮಾರ್ಗವನ್ನು ನೋಡುತ್ತಾ ನನ್ನ ತಲುಪುವ ಜಾಗದೆಡೆಗೆ ಹೊರಟೆ... ಹೆಲುಲುಯಿಯಾ!

## ಕ್ರಿಸ್‌ಮಸ್ - ಹೊಸ ಜೀವನದ ಆರಂಭ

ಲೂಸಿ ಮತ್ತು ಗ್ರೇಸಿ ಒಂದು ವರ್ಷ ಕ್ರಿಸ್‌ಮಸ್ ತಮ್ಮ ತಾಯಿಯೊಂದಿಗೆ ಆಚರಿಸುತ್ತಿದ್ದರೆ, ಮರುವರ್ಷ ನನ್ನೊಂದಿಗೆ ಆಚರಿಸುತ್ತಿದ್ದರು. ಆ ವರ್ಷ ಅವರು ನನ್ನೊಂದಿಗೆ ಆಚರಿಸುವುದಿತ್ತು. ನಾವೆಲ್ಲರೂ ನನ್ನ ತಂದೆ–ತಾಯಿಯ ಮನೆಯಿದ್ದ ಗ್ಲಾಸ್ಗೋದಲ್ಲಿ ಕಲೆತಿದ್ದೆವು. ಈ ಕ್ರಿಸ್‌ಮಸ್‌ನ ವಿಶೇಷ ಆಕರ್ಷಣೆ ಎಂದರೆ, ನೀನಾ ಡೆನ್ಮಾರ್ಕ್‌ನಿಂದ ನಮ್ಮ ಬಳಿಗೆ ಕ್ರಿಸ್‌ಮಸ್ ಆಚರಿಸಲು ಗ್ಲಾಸ್ಗೋಗೆ ಬರುತ್ತಿದ್ದಳು, ಅವಳನ್ನು ನಾನೇ ಆಹ್ವಾನಿಸಿದ್ದೆ.

ಒಂದು ವಾರಕ್ಕೆ ಮೊದಲೇ ಕ್ರಿಸ್‌ಮಸ್‌ಗಾಗಿ ಏರ್ಪಾಡುಗಳು ಆರಂಭವಾಗಿದ್ದವು. ಮನೆಯ ಸ್ವಚ್ಛತೆ, ಉಡುಗೊರೆಗಳ ಕೊಳ್ಳುವಿಕೆ ಮತ್ತು ಭೋಜನದ ಏರ್ಪಾಡುಗಳು ನಡೆಯುತ್ತಿದ್ದವು. ಲೂಸಿ–ಗ್ರೇಸಿ ತಮ್ಮ ಕ್ರಿಸ್‌ಮಸ್‌ನ ಉಡುಗೊರೆಗಳ ಪಟ್ಟಿಗಳನ್ನು ಬರೆದುಕೊಳ್ಳುವಲ್ಲಿ ಮಗ್ನರಾಗಿದ್ದರು. ನಾವು ದೊಡ್ಡ ಉಡುಗೊರೆಗಳು ಹಾಗೂ ಇನ್ನಿತರ ಸಾಮಾನುಗಳನ್ನು ಖರೀದಿಸುವಲ್ಲಿ ಮಗ್ನರಾಗಿದ್ದೆವು.

ಒಂದು ಸಜೀವ, ಸದಾ ಹಸುರಾಗಿರುವ ಶಂಕು ವೃಕ್ಷವನ್ನು 'ಕ್ರಿಸ್‌ಮಸ್ ಟ್ರೀ' ಎಂದು ಮನೆಯ ಡ್ರಾಯಿಂಗ್ ರೂಮಿನಲ್ಲಿ ಪ್ರತಿಷ್ಠಾಪಿಸಲಾಯಿತು. ನಾನು, ಲೂಸಿ ಮತ್ತು ಗ್ರೇಸಿ ವೃಕ್ಷವನ್ನು ಶೃಂಗಾರ ಮಾಡಿದೆವು, ಅದರ ಮೇಲೆ ಬಣ್ಣ ಬಣ್ಣದ ಬಲ್ಬುಗಳನ್ನು ಹಾಕಿದೆವು. ಬೆಳಕಿನಿಂದ ಹೊಳೆಯುವ 'ಟ್ರೀ' ಮನಸ್ಸನ್ನು ಆಕರ್ಷಿಸುತ್ತಿತ್ತು. ಅದರ ನೆತ್ತಿಯ ಮೇಲೆ ಹೊಳೆಯುವ ನಕ್ಷತ್ರ, ಬೆಥಲಹಮ್ ನಕ್ಷತ್ರಗಳ ಪ್ರತಿನಿಧಿಯಂತೆ ತೋರುತ್ತಿತ್ತು.

(ಸಶೇಷ)

# ಪ್ರತಿಕ್ರಿಯೆ




**ಶೈಲಿ ನವನವೀನ**

'ಹೊಸಬೆಳಗು' (ಎನ್. ಶೈಲಜಾ ಹಾಸನ) ಕಾದಂಬರಿಯ ಕಥಾವಸ್ತು ಹಳೆಯದಾದರೂ ವಿಷಯವನ್ನು ಹೇಳುವ ಶೈಲಿ ನವನವೀನ. ತೃತೀಯ ಲಿಂಗಿಗಳನ್ನು ಕುಟುಂಬದಿಂದ ದೂರವಿಟ್ಟು ಅವರನ್ನು ಮಾನಸಿಕ ಯಾತನೆಗೆ ದೂಡುವ ಬದಲಾಗಿ ಅವರಿಗೂ ತಮ್ಮದೇ ಆದ ಸ್ವಂತ ಬದುಕಿದೆ ಎಂಬುದನ್ನು ಎಲ್ಲರೂ ಮನಗಾಣಬೇಕಿದೆ. ಅಂತೆಯೇ ವೀರೂ ನಮ್ಮೆಲ್ಲರ ಮನಃಪಟಲದಲ್ಲಿ ಅಚ್ಚಳಿಯದೇ ಉಳಿದುಬಿಡುತ್ತಾನೆ.

**-ಸವಿತಾ ಮತ್ತಿಹಳ್ಳಿ, ಕಮಲಾದೇವಿ ರಾಜಶೇಖರ ಹಲ್ಲೂರ್**

**ಕಣ್ಣೀರು ತರಿಸಿತು**

'ಹೊಸಬೆಳಗು' ನಿಜಕ್ಕೂ ಇಂದಿನ ಜ್ವಲಂತ ಸಮಸ್ಯೆಗೆ ಬಹಳ ಸುಂದರವಾಗಿ ಹೊಸ ಬೆಳಕು ಚೆಲ್ಲಿದೆ. ಇದು ಕಿರುತೆರೆಯಲ್ಲಿ ಮೂಡಿ ಬಂದರೆ ಇನ್ನೂ ಹೆಚ್ಚು ಜನರನ್ನು ತಲುಪಿ ಸಮಾಜದ ಕಣ್ತೆರೆಸಬಹುದು. ಲೇಖಕಿಯ ನಿರೂಪಣೆ ಶೈಲಿ ಮನೋಜ್ಞ; ಕೆಲವೊಮ್ಮೆ ಕಣ್ಣೀರು ತರಿಸಿತು.

**-ಚಂದ್ರಶೇಖರ ಕೆ., ಬೆಂಗಳೂರು**

**ಸಮಾಜಕ್ಕೆ ಸಂದೇಶ**

ಬದುಕಿನಲ್ಲಿ ತಮ್ಮದಲ್ಲದ ತಪ್ಪಿಗೆ ತಾವೇ ನರಳಿ ಕಂದುತ್ತಿರುವ, ಇಲ್ಲವೇ ಸಮಾಜದ ಮತ್ತೊಂದು ಸಮಸ್ಯೆಗೆ ಗುರಿಯಾಗುತ್ತಿರುವಂತಹ ಮಂಗಳಮುಖಿಯರ ಮೊಗದಲ್ಲಿಷ್ಟು ಆಶಾಭಾವನೆ ಮೂಡುವಂತಹ ಕೆಲಸವನ್ನು ಕಾದಂಬರಿ ಮಾಡಿದೆ. ಅಲ್ಲದೆ ಸಮಾಜಕ್ಕೊಂದು ಸಂದೇಶವನ್ನು ನೀಡುವಂತಹ ವಸ್ತುವಿನ ಕಥಾ ಹಂದರವನ್ನು ಅತ್ಯಂತ ಸೂಕ್ಷ್ಮವಾಗಿ, ಸರಳವಾಗಿ ಹೆಣೆದು ಓದುಗರ ಮುಂದಿಟ್ಟಿರುವ ಲೇಖಕಿ ಶೈಲಜಾ ಹಾಸನ ಅಭಿನಂದನಾರ್ಹರು.

**-ರಾಜೇಶ್ವರಿ ಹುಲ್ಲೇನಹಳ್ಳಿ., ಹಾಸನ**

**ಮೆಚ್ಚುವಂಥದ್ದು**

ಮಂಗಳಮುಖಿ ಸಮುದಾಯದ ಜೀವನದ ಆಗುಹೋಗುಗಳನ್ನು ಮನಮುಟ್ಟುವಂತೆ ಬರೆದಿರುವ ಧಾರಾವಾಹಿ. ಅವರ ಕುಂದುಕೊರತೆಗಳ, ಬವಣೆಯ ನಡುವೆಯೂ ಬದುಕಲು ಅವರು ಪಡುವ ಪ್ರಯತ್ನಗಳು ಮೆಚ್ಚುವಂತಹುದು. ನಮಗೆ ಕಾಣಸಿಗುವ ಇವರು ಸುಮಾರು ಒಂದೇ ಪ್ರಾಯದವರಿರುತ್ತಾರೆ. ವಯಸ್ಸಾದವರ ಜೀವನದ ಬಗ್ಗೆಯೂ ಸ್ವಲ್ಪ ವಿವರಣೆ ಇದ್ದಿದ್ದರೆ ಚೆನ್ನಾಗಿರುತ್ತಿತ್ತು.

**-ವಿಜಯಾಪ್ರಸಾದ್, ಬೆಂಗಳೂರು**

**ಮನ ಪರಿವರ್ತನೆಯಾಗಬಹುದು**

ಧಾರಾವಾಹಿ ಓದಿ ಮನಮಿಡಿಯಿತು. ಇದುವರೆಗೂ ಇಂತಹವರನ್ನು ನೋಡಿ ಅಸಹ್ಯಪಡುತ್ತಿದ್ದವರು ಈ ಕಥೆಯನ್ನು ಓದಿದ ಮೇಲೆ ಅವರ ಮನಸ್ಸು ಪರಿವರ್ತನೆಯಾಗುವುದು ಖಂಡಿತ.

**-ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ, ಧನಲಕ್ಷ್ಮಿ ಪುರುಷೋತ್ತಮ ರಾವ್, ಕೋಲಾರ**

**ಮನಸ್ಸಿನ ತುಡಿತದ ಅನಾವರಣ**

ಲೇಖಕಿ ಚಿಕ್ಕದಾಗಿ ಚೊಕ್ಕವಾಗಿ ಮಂಗಳಮುಖಿಯರ ಮನಸ್ಸಿನ ತುಡಿತ, ಮನೆಯವರ ಮನಸ್ಸಿನ ಮುಜುಗರಗಳ ಘರ್ಷಣೆ ನಡುವೆ ಬದುಕಲ್ಲಿ ಹೊಸ ಬೆಳಕನ್ನು ಯಶಸ್ವಿಯಾಗಿ ಕೇವಲ ಒಂಬತ್ತು ಕಂತುಗಳಲ್ಲಿ ಸುಂದರವಾಗಿ ತಂದಿರುತ್ತಾರೆ.

**-ರಮಾಬಾಯಿ ಬಿ.**

ಧಾರಾವಾಹಿ ಚೆನ್ನಾಗಿ ಮೂಡಿಬಂದಿದೆ. ಆದರೆ ಅವಸರದಲ್ಲಿ ಮುಗಿಸಿದ ಹಾಗೆ ಅನಿಸಿತು. ಇನ್ನೂ ಒಂದೆರಡು ಕಂತುಗಳಲ್ಲಿ ಬರಬೇಕಾಗಿತ್ತು.

**-ವಿಜಯಲಕ್ಷ್ಮಿ ಹುಡೇದ, ವಿಜಯಪುರ**

**ಸಮಾಜಕ್ಕೆ ಸಂದೇಶ**

'ಗುರುವಾರ ಬಂತಮ್ಮಾ' ಎಂದು ಕುತೂಹಲದಿಂದ ಕಾಯುತ್ತಿದ್ದ ನನಗೆ, 'ಸುಧಾ' ಸಿಕ್ಕಿದ ತಕ್ಷಣ ಓದುತ್ತಿದ್ದುದು 'ಹೊಸಬೆಳಗು' ಕಾದಂಬರಿ. ಮಂಗಳಮುಖಿಯರ ಸ್ವಾಭಿಮಾನ ಜೀವನಕ್ಕೆ ಹೊಸಬೆಳಕನ್ನು ನೀಡುವ ಕಥೆ. ಸಮಾಜದಲ್ಲಿ ಇವರು ಹೇಗೆ ಒಳ್ಳೆಯ ಬದುಕನ್ನು ನಡೆಸಬಹುದು ಎಂದು ವರ್ಷಳ ಪಾತ್ರದಿಂದ ರೂಪಿಸಿರುವುದು ಸಮಂಜಸ ಎನಿಸಿದೆ. ಅವರನ್ನು ದೂಷಿಸದೆ ಸಮಾನ ಭಾವನೆಯಿಂದ ಕಾಣಬೇಕೆಂಬ ಸಂದೇಶ ಈ ಕಥೆಯಲ್ಲಿದೆ. ಒಟ್ಟಿನಲ್ಲಿ ಪ್ರತಿವಾರ ಕಥೆಯ ರಸದೌತಣವನ್ನು 'ಸುಧಾ' ಉಣಬಡಿಸಿದಂತಾಗಿದೆ.

**–ರಘೋತ್ತಮ ಟಿ.ವಿ. ಮೈಸೂರು**

**ಅಧ್ಯಯನದ ಕೊರತೆ**

ಲೇಖಕಿ ಎನ್. ಶೈಲಜಾ ಅವರು ವಿಶಿಷ್ಟ ಕಥಾವಸ್ತುವನ್ನು ಆರಿಸಿಕೊಂಡಿದ್ದಾರೆ. ಆದರೆ ಮಂಗಳಮುಖಿಯರು ಹಾಗಿರುವುದಕ್ಕೆ ವೈಜ್ಞಾನಿಕ ಕಾರಣ ಕೊಟ್ಟಿಲ್ಲ. ಅವರ ಮನಸ್ಸಿನ ಎಡಬಿಡಂಗಿ ಪರಿಸ್ಥಿತಿಯನ್ನೂ, ಸಾಮಾಜಿಕವಾಗಿ ಆದ ಅವಮಾನಗಳನ್ನೂ, ಚಿತ್ರಿಸುವಲ್ಲಿ ವಿಫಲರಾಗಿದ್ದಾರೆ. ಮಂಗಳಮುಖಿಯರದೇ ಸಮಾಜದಲ್ಲಿ ನಡೆಯುತ್ತಿರುವ ಗೊಂದಲಗಳ ಬಗ್ಗೆ ಏನೂ ಇಲ್ಲ. ಅವರಿಗಿರುವ ಅಸುರಕ್ಷತೆ ಮತ್ತು ಅಲ್ಲಿ ನಡೆಯುವ ಅಪರಾಧಗಳ ಬಗ್ಗೆಯೂ ಏನೂ ಇಲ್ಲ. ಅಧ್ಯಯನ ಮಾಡದೆ ಮನೆಯಲ್ಲಿ ಕೂತು ಬರೆದ ಕಾದಂಬರಿ.

**–ಮುರಳೀಧರ ಕುಮಾರ್**